ಚೈತ್ರಾ ಶಿವಯೋಗಿಮಠ
ಕಲೆ: ರೂಪಶ್ರೀ ಕಲ್ಲಿಗನೂರು

ಈ ರಾತ್ರಿಗೊಂದು ಕವಿತೆ

ಈ ರಾತ್ರಿಗೆ ನೀನು ಬಯಲಾಗು
ನಾನು ಬಳ್ಳಿಯಾಗುವೆ
ತೆಕ್ಕೆ ತುಂಬಾ ಹಬ್ಬುವೆ
ಹಸಿರು ರಾತ್ರಿಯ ಸೆರಗು ಸರಿದು
ಕೆತ್ತಳೆ ಬೆಳಗು ಮೂಡುವವರೆಗೆ

ಬಿಗಿ ಸಡಿಲಿಸದೇ ಹಬ್ಬುವೆ
ನೀನು ಮೋಹಿಸಿದ ದನಿಗೆ
ಆಂಟಿದ ಪಾಚಿಹಸುರು ಪೊರೆ ಕಳಚಿ
ಮತ್ತದೇ ರಾಗ ಪಲುಕುವವರೆಗೆ
ನಿನ್ನೆದೆ ಗಿಲಕಿ ತಾಳ ಹಾಕುವ
ಆದೇ ಮೋಹಕ ದನಿ ಉಲಿಯುವವರೆಗೆ

ಈ ರಾತ್ರಿಗೆ ನೀನು ಹೊಳೆಯಾಗು
ನಾನು ಬಾಯಾರಿದ ಬೊಗಸೆಯಾಗುವೆ
ಉಕ್ಕುವ ಹೊಳೆಯ ತುಟಿಗಳಿಗೆ ಮುತ್ತಿಕ್ಕಿ
ನನ್ನ ಕಾಡಿಗೆ ಕಂಗಳಲಿ ಕಳೆದು ಹೋದ
ಬಿಸಿಲು ಬೆಳುದಿಂಗಳ ಚಿಕ್ಕೆಗಳ ಹುಡುಕುವೆ

ನೀನು ಸೊಕ್ಕಿ ಹರಿದಷ್ಟೂ
ನಾನು ಸೋಕುವೆ ನನ್ನ ಆದೇ ಒಣಗಿದ ತುಟಿಗಳನ್ನು
ಅಲೆಅಲೆಅಲೆಯಾಗಿ ಅಲೆದಾಡಿ ಕಳೆದು ಹೋಗಿರುವ
ನನ್ನ ಕಪ್ಪು ಕಡಲ ಹಂಸರಾಗವನ್ನು
ಹುಡುಕಿ ತರುವೆ

ಈ ರಾತ್ರಿಗೆ ನೀನು ಬೊಂಬೆಯಾಗು
ಆಟದ ನಿಯಮಗಳ ಹಂಗಿರದ
ಮುದ್ದು ಮಗುವಾಗುವೆ
ಇಕೋ ನೀ ಬೇಡಿದಂತೆ ಕೊಡುವೆ
ಒಂದು ಒಂದು ಒಂದು ಒಂದೊಂದೇ
ಉಗುರು ಬೆಚ್ಚಗಿನುಸಿರ ಬಿಸುಪನ್ನು